# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬


ಸಂಖ್ಯೆ: ಕರಾಮುವಿ/ಡೀನ್(ಶೈ)/04/224/2026-27 ದಿನಾಂಕ:13-07-2026

## ಟಿಪ್ಪಣಿ

ವಿಷಯ: 2026-27ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯಲ್ಲಿ ವಿವಿಧ ಶಿಕ್ಷಣಕ್ರಮಗಳಿಗೆ ಸಿ.ಬಿ.ಸಿ.ಎಸ್/ ವಾರ್ಷಿಕ ಪದ್ಧತಿ ಅಡಿಯಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಮುದ್ರಿತ ಬೋಧನಾ ಸಾಮಗ್ರಿಯನ್ನು ನೀಡುವ ಬಗೆಗೆ.

ಉಲ್ಲೇಖ:1. ಈ ಕಚೇರಿ ಆದೇಶ ಸಮ ಸಂಖ್ಯೆ: ಕರಾಮುವಿ/ಡೀನ್(ಶೈ)/04/224/2024-25, ದಿನಾಂಕ: 27-11-2024, ದಿನಾಂಕ: 19-02-2025, ದಿನಾಂಕ:19-07-2025 ಮತ್ತು ದಿನಾಂಕ:23-01-2026

2. ಸಿದ್ಧಪಾಠಗಳ ವಿತರಣೆ ಸಂಬಂಧ ನಡೆಸಲಾದ ಸಭೆಯ ತೀರ್ಮಾನ ದಿನಾಂಕ:13-07-2026.

3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 13-07-2026.

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ, ಮುದ್ರಿತ ಅಧ್ಯಯನ ಸಾಮಾಗ್ರಿಗಳ ಬದಲಾಗಿ ಸಾಫ್ಟ್ ಕಾಪಿ ಮಾತ್ರ ನೀಡಿದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಶೇಕಡ 10% ರಿಯಾಯಿತಿ ನೀಡುವ ಕುರಿತು ಉಲ್ಲೇಖ(1)ರಂತೆ ಕಚೇರಿ ಆದೇಶಗಳನ್ನು ಹೊರಡಿಸಲಾಗಿತ್ತು. ಪ್ರಸ್ತುತ, ಉಲ್ಲೇಖ(3)ರಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಿದ್ಧಪಾಠ, ಪ್ರವೇಶಾತಿ ವಿಭಾಗದ ಅಧಿಕಾರಿಗಳು ಹಾಗೂ ಶಾಸನಬದ್ಧ ಅಧಿಕಾರಿಗಳ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ, 2026-27ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯಿಂದ ಎಲ್ಲಾ ಸ್ನಾತಕ/ಸ್ನಾತಕೋತ್ತರ/ಪಿಜಿಡಿಪ್ಲೋಮಾ/ಡಿಪ್ಲೋಮಾ/ಸರ್ಟಿಫಿಕೇಟ್ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಪಡೆಯುವ Fresher's and Renewal's ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದ ಅಧ್ಯಯನ ಸಾಮಾಗ್ರಿಗಳನ್ನು ಮುದ್ರಣ ಮಾಡಿಸಿ ಸೆಪ್ಟಂಬರ್-2026ರ ಮಾಹೆಯೊಳಗೆ ಪ್ರವೇಶಾತಿ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ವಿತರಣೆ ಮಾಡಲು ಸಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸದರಿ ಕಾರ್ಯವನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಮಾನ್ಯ ಕುಲಪತಿಗಳು ಆದೇಶಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪ್ರವೇಶಾತಿ ಅಧಿಸೂಚನೆ ಮತ್ತು ಪ್ರಕಟಣೆ ಪ್ರತಿಗಳಲ್ಲಿ ಸಿದ್ಧಪಾಠಗಳಿಗೆ ಸಂಬಂಧಿಸಿದಂತೆ, ಶೇ.10% ರಿಯಾಯಿತಿಯನ್ನು ನೀಡುವ ಸಂಬಂಧ ಘೋಷಿಸಿದ್ದನ್ನು ರದ್ದುಪಡಿಸಿ ಪ್ರಕಟಣೆ ಹೊರಡಿಸಲು ಸೂಕ್ತಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಂದ ನಿರ್ದೇಶನದಂತೆ ಸೂಚಿಸಿದೆ.

ಡೀನ್(ಶೈಕ್ಷಣಿಕ)

ಗೆ:

1. ನಿರ್ದೇಶಕರು ಹಾಗೂ ಉಪಕುಲಸಚಿವರು ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
2. ಅಧ್ಯಕ್ಷರು, ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು.
3. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ, ಪ್ರಾದೇಶಿಕ ಕೇಂದ್ರ
4. ಉಪ ಕುಲಸಚಿವ (ಸಿದ್ಧಪಾಠ) ವಿಭಾಗ, ಕರಾಮುವಿ

ಪ್ರತಿ :

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು.(ಪ್ರಾದೇಶಿಕ ಕೇಂದ್ರಗಳಿಗೆ ಮಾಹಿತಿ ಒದಗಿಸುವುದು)
3. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ, ಕರಾಮುವಿ, ಮೈಸೂರು.
4. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಶಾಖೆ, ಕರಾಮುವಿ, ಮೈಸೂರು
5. ನೋಡಲ್ ಆಫೀಸರ್ ವೆಬ್‌ಸೈಟ್ ನಿರ್ವಹಣೆ ಕರಾಮುವಿ, ಮೈಸೂರು.
6. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
7. ಕಚೇರಿ ಆದೇಶ.